ಓ.ಎಸ್. ನಂ.191/2016
ಡಿಡಬ್ಲು-1

ದಿನಾಂಕ 05.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ವಾದಿ ಪರ ವಕೀಲರಿಂದ

ನನಗೆ 06-ಜನ ಮಕ್ಕಳಿದ್ದು ಅವರಲ್ಲಿ ಇಬ್ಬರು ಮಕ್ಕಳು ಮೃತಪಟ್ಟಿರುತ್ತಾರೆ. ಮೃತಪಟ್ಟವರ ಹೆಸರು ರಾಚಣ್ಣ ಮತ್ತು ಮಲ್ಲಿಕಾರ್ಜುನ ಇರುತ್ತದೆ. ನನ್ನ ಮಗಳು ಗಂಗಮ್ಮಳ ಮದುವೆಯಾಗಿ 25-ವರ್ಷಗಳಾಗಿರುತ್ತವೆ. ನನ್ನ ಮಗಳು ಶ್ರೀದೇವಿಯ ಮದುವೆಯಾಗಿ 18-ವರ್ಷಗಳಾಗಿರುತ್ತವೆ. ನನ್ನ ಮಗಳು ಶಿವಾಲೀಲಾಳ ಮದುವೆಯಾಗಿ 9-ವರ್ಷಗಳಾಗಿರುತ್ತವೆ. ನನ್ನ ಮಗ ವಿಶ್ವನಾಥನಿಗೆ ಪ್ರಸ್ತುತ 24-ವರ್ಷಗಳಾಗಿರುತ್ತದೆ.

ನಮ್ಮ ಕುಟುಂಬಕ್ಕೆ ಒಟ್ಟು 04 ಜಮೀನುಗಳಿದ್ದು ಒಟ್ಟು 100-ಎಕರೆ ಜಮೀನು ಇರುತ್ತದೆ. ಸದರಿ ಜಮೀನುಗಳಲ್ಲಿ ಬಳಬಟ್ಟಿ ಗ್ರಾಮದಲ್ಲಿ 21-ಎಕರೆ ಜಮೀನು ಇದ್ದು ಮತ್ತು 36-ಎಕರೆ ಜಮೀನು ಜೇವರ್ಗಿಯಲ್ಲಿರುತ್ತದೆ. ಸದರಿ ಜಮೀನುಗಳು ಪಿತ್ರಾರ್ಜಿತ ಆಸ್ತಿಗಳಿರುತ್ತದೆ. ನನ್ನ ಗಂಡನಿಗೆ 02-ಜನ ಸಹೋದರರು ಇರುತ್ತಾರೆ. ನನ್ನ ಗಂಡ ಮತ್ತು ಆತನ ಸಹೋದರರ ನಡುವೆ ಕುಟುಂಬದ ಆಸ್ತಿಗಳಲ್ಲಿ ಪಾಲು ಆಗಿರುವುದಿಲ್ಲ. ಪ್ರಸ್ತುತವಾಗಿ ಸಹ ಕುಟುಂಬದ ಆಸ್ತಿಗಳು ಜಂಟಿಯಾಗಿ ಸಾಗುವಳಿ ಮಾಡುತ್ತೇವೆ ಎಂದರೆ ಸರಿ.

ವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ